# ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ

ಮುಕ್ತಗಂಗೋತ್ರಿ, ಮೈಸೂರು–570006.

ಕರಾಮುವಿ/ಡೀನ್(ಅ.ಕೇ.)/ಬಿ.ಎಡ್/2018–19

ದಿನಾಂಕ : 23.03.2019

## ಅಧಿಸೂಚನೆ

**2018–19ನೇ ಶೈಕ್ಷಣಿಕ ಸಾಲಿಗೆ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರ' ಗಳನ್ನು ರಾಜ್ಯದ ವಿವಿಧ ಕಾಲೇಜುಗಳಲ್ಲಿ ಸ್ಥಾಪಿಸಿರುವ ಬಗ್ಗೆ.**

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು 'ಮುಕ್ತ ಮತ್ತು ದೂರ ಶಿಕ್ಷಣ ಪದ್ಧತಿ' ಯಲ್ಲಿ ಶಿಕ್ಷಣವನ್ನು ನೀಡುತ್ತ ಬಂದಿದೆ. 'ಉನ್ನತ ಶಿಕ್ಷಣ ಎಲ್ಲರಿಗೂ ಎಲ್ಲೆಡೆ' ಎಂಬ ಧ್ಯೇಯವಾಕ್ಯಕ್ಕೆ ಅನುಗುಣವಾಗಿ 'ಕಲಿಕಾರ್ಥಿ ಸಹಾಯ ಕೇಂದ್ರ' ಗಳ ಮೂಲಕ ವಿದ್ಯಾರ್ಥಿಯ ಬಳಿಗೆ ವಿದ್ಯೆಯನ್ನು ತಲುಪಿಸುತ್ತಲಿದೆ. ಈ ಹಿನ್ನೆಲೆಯಲ್ಲಿ ಕಲಿಕಾರ್ಥಿ ಸಹಾಯ ಕೇಂದ್ರಗಳ ಪಾತ್ರವು ಮುಕ್ತ ಮತ್ತು ದೂರಶಿಕ್ಷಣ ಪದ್ಧತಿಯಲ್ಲಿ ಬಹು ಮಹತ್ವದ್ದು.

ಯು.ಜಿ.ಸಿ 'ಮುಕ್ತ ಮತ್ತು ದೂರ ಶಿಕ್ಷಣ' ನಿಯಮಾವಳಿ–2017 ಹಾಗೂ ಕರಾಮುವಿ ನಿಯಮ–1992ರ 2(K) ಪ್ರಕಾರ 2018–19ನೇ ಸಾಲಿನಲ್ಲಿ ಬಿ.ಎಡ್ ಶಿಕ್ಷಣಕ್ರಮಗಳಿಗೆ ಪ್ರವೇಶಾತಿ ಹೊಂದಿರುವ ವಿದ್ಯಾರ್ಥಿಗಳಿಗೆ ಸಂಪರ್ಕ ಕಾರ್ಯಕ್ರಮ ಮತ್ತಿತರೆ ಶೈಕ್ಷಣಿಕ ಚಟುವಟಿಕೆಗಳನ್ನು ಕಲಿಕಾರ್ಥಿ ಸಹಾಯ ಕೇಂದ್ರಗಳ ಮೂಲಕ ನಿರ್ವಹಿಸುವ ಸಲುವಾಗಿ, NCTE ಮಾನ್ಯತೆ ಹೊಂದಿರುವ ರಾಜ್ಯದ ಆಯ್ದ ಬಿ.ಎಡ್ ಕಾಲೇಜುಗಳಲ್ಲಿ **'ಕರಾಮುವಿ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರ'**ಗಳನ್ನು ಒಡಂಬಡಿಕೆ ಮಾಡಿಕೊಳ್ಳುವ ಮೂಲಕ ಸ್ಥಾಪಿಸಬೇಕಾಗಿದೆ.

ಈ ಸಂಬಂಧ, 154ನೇ ವ್ಯವಸ್ಥಾಪನಾ ಮಂಡಳಿ ಸಭೆಯ ಅನುಮೋದನೆ ದಿನಾಂಕ : 04–02–2019 ಮತ್ತು ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ : 20.02.2019 ರ ಮೇರೆಗೆ ಭೌಗೋಳಿಕ ಪ್ರಾತಿನಿಧ್ಯ ಪರಿಗಣಿಸಿ, ಮೂಲಭೂತ ಶೈಕ್ಷಣಿಕ ಸೌಲಭ್ಯವನ್ನು ಹೊಂದಿರುವ ಕಾಲೇಜು ಮುಂತಾದ ಇತರ ಮಾನದಂಡಗಳ ಹಿನ್ನೆಲೆಯಲ್ಲಿ 2018–19ನೇ ಶೈಕ್ಷಣಿಕ ಸಾಲಿನಲ್ಲಿ ಕಛೇರಿ ಆದೇಶ ಸಂಖ್ಯೆ: ಕರಾಮುವಿ/ಡೀನ್(ಅ.ಕೇ.)/ಬಿ.ಎಡ್/2018–19, ದಿನಾಂಕ: 20.02.2019 ರ ಅನ್ವಯ, ದಿನಾಂಕ: 20.02.2019 ರಿಂದ ಜಾರಿಗೆ ಬಂದಂತೆ ಈ ಕೆಳಕಂಡ ರಾಜ್ಯದ ಹತ್ತು ಕಾಲೇಜುಗಳಲ್ಲಿ ಬಿ.ಎಡ್ ಕಲಿಕಾರ್ಥಿ ಸಹಾಯ ಕೇಂದ್ರಗಳನ್ನು ಸ್ಥಾಪಿಸಿ ಈ ಅಧಿಸೂಚನೆ ಹೊರಡಿಸಲಾಗಿದೆ.

1. **ಡಾ. ಅಂಬೇಡ್ಕರ್ ಕಾಲೇಜ್ ಆಫ್ ಎಜುಕೇಷನ್, ಮಹಾಲಕ್ಷ್ಮಿಪುರಂ, ಬೆಂಗಳೂರು.**
2. **ಶ್ರೀ ಸರ್ವಜ್ಞ ಕಾಲೇಜ್ ಆಫ್ ಎಜುಕೇಷನ್, ವಿಜಯನಗರ, ಬೆಂಗಳೂರು.**
3. **ಓಂಕಾರ್‌ಮಲ್ ಸೋಮಾನಿ ಕಾಲೇಜ್ ಆಫ್ ಎಜುಕೇಷನ್, ಮೈಸೂರು.**
4. **ಬಗವಾನ್ ಬುದ್ಧ ಕಾಲೇಜ್ ಆಫ್ ಎಜುಕೇಷನ್, ಮಳವಳ್ಳಿ, ಮಂಡ್ಯ(ಜಿ).**
5. **ನಾಷನಲ್ ಕಾಲೇಜ್ ಆಫ್ ಎಜುಕೇಷನ್, ಶಿವಮೊಗ.**
6. **ಕರ್ನಾಟಕ ಯುನಿವರ್ಸಿಟಿ ಕಾಲೇಜ್ ಆಫ್ ಎಜುಕೇಷನ್, ಧಾರವಾಡ.**
7. **ವಿವೇಕಾನಂದ ಕಾಲೇಜ್ ಆಫ್ ಎಜುಕೇಷನ್, ಪುತ್ತೂರು, ದಕ್ಷಿಣ ಕನ್ನಡ.**
8. **ಎಸ್.ಆರ್.ಕೆ. ಕಾಲೇಜ್ ಆಫ್ ಎಜುಕೇಷನ್, ರಾಯಚೂರು.**
9. **ಕೆ.ಎಸ್.ಎಸ್. ಕಾಲೇಜ್ ಆಫ್ ಎಜುಕೇಷನ್, ದಾವಣಗೆರೆ.**
10. **ಬಿ.ಎಲ್.ಡಿ.ಇ.ಎ. ಜೆ.ಎಸ್.ಎಸ್ ಕಾಲೇಜ್ ಆಫ್ ಎಜುಕೇಷನ್, ವಿಜಯಪುರ.**

ಆದೇಶದ ಮೇರೆಗೆ

23/3

**ಕುಲಸಚಿವ**

ಪ್ರತಿ:–

1. ಕರ್ತೃವಾಧಿಕಾರಿಗಳು, ಮಾನ್ಯ ಕುಲಪತಿಗಳ ಆಪ್ತ ಕಾರ್ಯಾಲಯ, ಕರಾಮುವಿ, ಮೈಸೂರು.
2. ಮಾನ್ಯ ಕುಲಸಚಿವರ ಆಪ್ತ ಸಹಾಯಕರು, ಕರಾಮುವಿ, ಮೈಸೂರು.
3. ಎಲ್ಲಾ ಶಾಸನಬದ್ಧ ಅಧಿಕಾರಿಗಳು, ಕರಾಮುವಿ, ಮೈಸೂರು.
4. ಡೀನ್ (ಅಧ್ಯಯನ ಕೇಂದ್ರಗಳು), ಕರಾಮುವಿ, ಮೈಸೂರು
5. ಗ್ರಂಥಪಾಲಕರು, ಗ್ರಂಥಾಲಯ, ಕರಾಮುವಿ, ಮೈಸೂರು.
6. ನಿರ್ದೇಶಕರು, ಪ್ರವೇಶಾತಿ ವಿಭಾಗ, ಕರಾಮುವಿ, ಮೈಸೂರು.
7. ಮುಖ್ಯಸ್ಥರು, ಶಿಕ್ಷಣಶಾಸ್ತ್ರ ಅಧ್ಯಯನ ವಿಭಾಗ, ಕರಾಮುವಿ, ಮೈಸೂರು.
8. ಪ್ರಾಂಶುಪಾಲರು, ಸಂಬಂಧಪಟ್ಟ ಬಿ.ಎಡ್ ಕಾಲೇಜು.
9. ಪ್ರಾದೇಶಿಕ ನಿರ್ದೇಶಕರು, ಸಂಬಂಧಪಟ್ಟ ಕರಾಮುವಿ ಪ್ರಾದೇಶಿಕ ಕೇಂದ್ರ.
10. ಕಛೇರಿ ಪ್ರತಿ.

Scanned by CamScanner